ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	43
ಸದಸ್ಯರ ಹೆಸರು	ಶ್ರೀ ಎನ್ ರವಿಕುಮಾರ್
ಉತ್ತರಿಸುವ ದಿನಾಂಕ	15-09-2021
ಉತ್ತರಿಸುವವರು	ಮಾನ್ಯ ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕಳೆದ 5 ವರ್ಷಗಳಲ್ಲಿ ಮುಜರಾಯಿ ಇಲಾಖೆಯ ಧಾರ್ಮಿಕ ಮತ್ತು ದತ್ತಿ ನಿಧಿಯಿಂದ ಎಷ್ಟು ಹಿಂದೂಯೇತರ ಸಂಸ್ಥೆಗಳಿಗೆ ಅನುದಾನ/ಧನಸಹಾಯಕ/ ವೇತನ ನೀಡಲಾಗಿದೆ; ಜಿಲ್ಲಾವಾರು ಮಾಹಿತಿಯನ್ನು ಯಾವ ಧಾರ್ಮಿಕ ಸಂಸ್ಥೆಗೆ ನೀಡಲಾಗಿದೆಯೇ; ಆ ಸಂಸ್ಥೆಯ ಹೆಸರಿನೊಂದಿಗೆ ನೀಡುವುದು;	ಕಳೆದ 5 ವರ್ಷಗಳಲ್ಲಿ ಮುಜರಾಯಿ ಇಲಾಖೆಯ ಧಾರ್ಮಿಕ ಮತ್ತು ದತ್ತಿ ನಿಧಿಯಿಂದ ಹಿಂದೂಯೇತರ ಸಂಸ್ಥೆಗಳಿಗೆ ಅನುದಾನ/ ಧನಸಹಾಯಕ/ ವೇತನ ನೀಡಿರುವುದಿಲ್ಲ.
ಆ)	ಕಳೆದ 03 ವರ್ಷಗಳಲ್ಲಿ ಧಾರ್ಮಿಕ ಮತ್ತು ದತ್ತಿ ಇಲಾಖೆಗೆ ಇತರ ಧರ್ಮದ ಧಾರ್ಮಿಕ ಸಂಸ್ಥೆಗಳಿಂದ ಬಂದಿರುವ ಅನುದಾನ/ ಧನಸಹಾಯ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)	ಕಳೆದ 03 ವರ್ಷಗಳಲ್ಲಿ ಧಾರ್ಮಿಕ ಮತ್ತು ದತ್ತಿ ಇಲಾಖೆಗೆ ಇತರ ಧರ್ಮದ ಧಾರ್ಮಿಕ ಸಂಸ್ಥೆಗಳಿಂದ ಅನುದಾನ/ ಧನಸಹಾಯ ಬಂದಿರುವುದಿಲ್ಲ.
ಇ)	ಭಕ್ತರು ಸಂಬಂಧಿತ ದೇವಸ್ಥಾನದ ದೇವರ ಹುಂಡಿಗಳಿಗೆ ಕಾಣಿಕೆಯನ್ನು ಹಾಕುವುದು ಸಂಬಂಧಿತ ದೇವಸ್ಥಾನಗಳ ದೇವರುಗಳ ಹೆಸರಿನಲ್ಲಿ ಹಾಕಿರುವಾಗ ಸದರಿ ಕಾಣಿಕೆಯ ಮೊತ್ತವನ್ನು ಇತರೆ ಧರ್ಮೀಯರ ಪ್ರಾರ್ಥನಾ ಸ್ಥಳಗಳ ಅಭಿವೃದ್ಧಿ/ ವೇತನ/ ಅನುದಾನ ರೀತಿಯಲ್ಲಿ ಬಳಸಲು ಇರುವ ನಿಯಮಗಳೇನು; (ಪ್ರತಿಯನ್ನು ಒದಗಿಸುವುದು)	ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಕಾಯ್ದೆ 1997, ನಿಯಮಾವಳಿ 2002ರನ್ವಯ ಕಾಣಿಕೆಯ ಮೊತ್ತವನ್ನು ಇತರೆ ಧರ್ಮೀಯ ಪ್ರಾರ್ಥನಾ ಸ್ಥಳಗಳ ಅಭಿವೃದ್ಧಿ/ ವೇತನ/ ಅನುದಾನ ರೀತಿಯಲ್ಲಿ ಬಳಸಲು ಅವಕಾಶವಿರುವುದಿಲ್ಲ.
ಈ)	ದರ್ಗಾ, ಮಸೀದಿ, ವಕ್ಫ್ ಆಸ್ತಿಗಳನ್ನು ಧಾರ್ಮಿಕ ಮತ್ತು ದತ್ತಿ ಇಲಾಖೆಯ ಅಧೀನದಲ್ಲಿ ತರುವ ಕುರಿತು ಸರ್ಕಾರದ ನಿಲುವೇನು; ಈ ಕುರಿತು ಯಾವಾಗ ಕಾನೂನು ಜಾರಿಗೆ ತರಲಾಗುವುದು.	ದರ್ಗಾ, ಮಸೀದಿ, ವಕ್ಫ್ ಆಸ್ತಿಗಳು ಧಾರ್ಮಿಕ ದತ್ತಿ ಇಲಾಖೆಯ ಅಧೀನಕ್ಕೆ ಬರುವುದಿಲ್ಲವಾದ್ದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ

....2

ಉ)	ಮುಜರಾಯಿ ಇಲಾಖೆಯ ನಿಧಿಯಿಂದ ಹಿಂದೂಯೇತರ ಸಂಸ್ಥೆಗಳಿಗೆ ನೀಡಿದ ಅನುದಾನ/ ಧನಸಹಾಯ/ ವೇತನದ ವಿವರಗಳನ್ನು ಆಯಾಯಾ ಜಿಲ್ಲೆಯ ಪ್ರಮುಖ ಹಿಂದೂ ದೇವಸ್ಥಾನಗಳಿಗೆ ಫಲಕದ ಮೂಲಕ ಪ್ರಕಟಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಈ ಮೊತ್ತವು ಹಿಂದೂ ಭಕ್ತರು ಹಿಂದೂ ದೇವಳಗಳಿಗೆ ಕಾಣಿಕೆ/ ಸೇವೆ/ ಹರಿಕೆಯ ರೂಪದಲ್ಲಿ ನೀಡಿರುವುದರಿಂದ ಅವರು ಈ ರೀತಿಯಾಗಿ ನೀಡಿದ ಮೊತ್ತವನ್ನು ಯಾವ ರೀತಿಯಲ್ಲಿ ವೆಚ್ಚ ಮಾಡಲಾಗಿದೆ ಎಂದು ತಿಳಿಯುವುದು ಹಿಂದೂ ಭಕ್ತರ ಸಾಂವಿಧಾನಿಕ ಹಕ್ಕಾಗಿರುವ ಕುರಿತು ಸರ್ಕಾರದ ನಿಲುವೇನು?	ಧಾರ್ಮಿಕ ದತ್ತಿ ಇಲಾಖೆಯ ನಿಧಿಯಿಂದ ಹಿಂದೂಯೇತರ ಸಂಸ್ಥೆಗಳಿಗೆ ಅನುದಾನ/ ಧನಸಹಾಯ ಮಂಜೂರು ಮಾಡದೆ ಇರುವುದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಸಂಖ್ಯೆ: ಕಂಇ 166 ಮುಸಪ್ರ 2021

(ಶಶಿಕಲಾ. ಅ. ಜೊಲ್ಲೆ)
ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು